# ಗೌಪ್ಯ ಧ್ವನಿಗಳು ನಿಜಾಂಶಗಳು

**ಪ್ರವಾಸಿ ತಾಣಗಳಲ್ಲಿ ಎಲ್‌ಜಿಬಿಟಿ ಸಮುದಾಯಗಳ ಹಕ್ಕುಗಳ ಶೋಷಣೆ!**



ವಿಭಿನ್ನ ಲಿಂಗ ಸಂಬಂಧಿತ ಗುರುತುಗಳು ಮತ್ತು ಲೈಂಗಿಕ ದೃಷ್ಟಿಕೋನಗಳನ್ನು ಹೊಂದಿದ್ದರೂ ಸಹ, ಇತರೆ ಸಾಮಾನ್ಯ ಮಾನವರಂತೆ ತಾವೂ ಸಹ ಸಹಜ ಮಾನವರು ಎಂದು ಗಟ್ಟಿಯಾಗಿ ವರ್ಷಗಳಿಂದ ಕೂಗಿ ಹೇಳುತ್ತಿದ್ದಾರೆ. ಹೌದು, ಸಮಾಜ ಹಾಗೂ ರಾಜ್ಯ ಅವರನ್ನು ಅರ್ಥ ಮಾಡಿಕೊಳ್ಳಲು ಪ್ರಯಾಸಪಡುತ್ತಿದ್ದು, ಒಪ್ಪಿಕೊಳ್ಳಲು ಹೆಣಗಾಡುತ್ತಿರುವಂತೆಯೇ, ಎಲ್‌ಜಿಬಿಟಿ ಸಮುದಾಯಗಳು ಅಂಚಿನಲ್ಲಿ ಬದುಕು ದೂಡುವುದು ಮುಂದುವರೆದಿದೆ.

---

ಈ ಹಿನ್ನೆಲೆಯಲ್ಲಿ, ಪ್ರವಾಸೋದ್ಯಮ ಮತ್ತು ಎಲ್‌ಜಿಬಿಟಿ ಸಮುದಾಯಗಳ ನಡುವಿನ ಸಂಬಂಧಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಅವರು ಎದುರಿಸುವ ಸವಾಲುಗಳನ್ನು ಅರಿಯಲು, ಈಕ್ವೇಷನ್ಸ್ ಕರ್ನಾಟಕದ 3 ಪ್ರವಾಸಿ ತಾಣಗಳಲ್ಲಿ ಎಲ್‌ಜಿಬಿಟಿ ಸಮುದಾಯಗಳಿಗೆ ಸಂಬಂಧಿಸಿದಂತೆ ಅಧ್ಯಯನ ನಡೆಸಿತು.

**ಎಲ್ಲಮ್ಮ ದೇವಸ್ಥಾನ** ಬೆಳಗಾವಿ ಜಿಲ್ಲೆಯಲ್ಲಿರುವಂತಹ ಒಂದು ಜನಪ್ರಿಯ ಪ್ರವಾಸೀ ತಾಣ. ಜೋಗಪ್ಪ ಸಮುದಾಯದ ಜನರ ಬಗ್ಗೆ, ಭಾರತದಲ್ಲಿ ಅತೀ ಕಡಿಮೆ ಪ್ರಮಾಣದ ತಿಳುವಳಿಕೆ ಇದೆ. ಇವರು ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಜನರಾಗಿದ್ದು, ಎಲ್ಲಮ್ಮ ದೇವತೆಯನ್ನು ಪೂಜಿಸುತ್ತಾರೆ. ಕೆಲವು ಮಹಿಳೆಯರು ಮತ್ತು ಪುರುಷರು ತಮ್ಮನ್ನು ತಾವು ದೈವಕ್ಕೆ ಸಮರ್ಪಿಸಿಕೊಳ್ಳುತ್ತಾರೆ. ಜೊತೆಗೆ, ಅವರ ಸಂಗಾತಿಗಳು ಅಥವಾ ಅವರ ಮಕ್ಕಳನ್ನೂ ಸಹ ಎಲ್ಲಮ್ಮ ದೇವತೆಯ ಸೇವೆಗಾಗಿ ಮೀಸಲಿರಿಸುತ್ತಾರೆ, ಪುರುಷರಿಂದ ಮಹಿಳೆಯರಾಗಿರುವಂತಹ ಲೈಂಗಿಕ ಅಲ್ಪಸಂಖ್ಯಾತರು ಈ ದೇವತೆಯನ್ನು "ಆಯ್ಕೆ" ಮಾಡಿಕೊಳ್ಳುತ್ತಾರೆ. ಇವರು ಪೂಜೆಗಳನ್ನು ನೆರವೇರಿಸುವುದರ ಜೊತೆಗೆ, ಆಶೀರ್ವಾದವನ್ನು ನೀಡುತ್ತಾರೆ, ನೃತ್ಯ ಮತ್ತು ಹಾಡುವ ಮೂಲಕ ಸಾಂಪ್ರದಾಯಿಕ ರೀತಿಯಲ್ಲಿ ಎಲ್ಲಮ್ಮ ದೇವಸ್ಥಾನದ ಕಥೆಯನ್ನು ವಿವರಿಸುತ್ತಾರೆ. ಈ ಮೂಲಕ ಪ್ರವಾಸಿಗರು ಮತ್ತು ಭಕ್ತರನ್ನು ಆಕರ್ಷಿಸಿ, ಅವರ ಜೀವನಾಧಾರಕ್ಕೆ ಬೆಂಬಲವನ್ನು ಪಡೆಯುತ್ತಾರೆ.

**ಮೈಸೂರು** ನಮ್ಮ ರಾಜ್ಯದಲ್ಲಿ ಈ ರೀತಿ ಬೃಹತ್ ಪ್ರಮಾಣದ ಪ್ರವಾಸಿಗರನ್ನು ಆಕರ್ಷಿಸುವ ಹಬ್ಬಗಳ ಪೈಕಿ ಮೈಸೂರು ದಸರಾ ಸಹ ಒಂದು. ದಸರಾ ಹಬ್ಬದ ಸಂದರ್ಭದಲ್ಲಿ, ಮೈಸೂರು ನಗರದಲ್ಲಿ, ಅಂಗಡಿಗಳು ಮತ್ತು ವಾಣಿಜ್ಯ ಮಳಿಗೆಗಳಲ್ಲಿ ಪೂಜೆಗಳನ್ನು ನೆರವೇರಿಸುತ್ತಾರೆ ಮತ್ತು ರಸ್ತೆಗಳಲ್ಲಿ ಬಸ್ತಿ ಮತ್ತು ನೃತ್ಯಗಳನ್ನು ಪ್ರದರ್ಶಿಸುವುದು ಬೆಳೆದುಕೊಂಡು ಬಂದಿರುವಂತಹ ಒಂದು ಸಂಪ್ರದಾಯವಾಗಿದ್ದು, ಈ ಹಿನ್ನೆಲೆಯಲ್ಲಿ ಎಲ್‌ಜಿಬಿಟಿ ಸಮುದಾಯದ ಜನರು ನೆರೆಯ ಸ್ಥಳಗಳಿಂದ ಮೈಸೂರಿಗೆ ವಲಸೆ ಬರುತ್ತಾರೆ

**ಶಿವಮೊಗ್ಗ** ಒಂದು ಜನಪ್ರಿಯ ಸ್ಥಳೀಯ ಪ್ರವಾಸಿ ತಾಣವಾಗಿದ್ದು, ಅನೇಕ ನೀರಿನ ಮೂಲಗಳು ಮತ್ತು ಕಾಡುಗಳಂತಹ ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿರುವ ಸಂಪದ್ಭರಿತ ಸ್ಥಳವಾಗಿದೆ. ಸಂಭವನೀಯ ಗ್ರಾಹಕರು ದೊರೆತಾಗ ಎಲ್‌ಜಿಬಿಟಿ ಸಮುದಾಯಗಳು ಮಾರ್ಗದರ್ಶನ ನೀಡುವುಂತಹ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ ಮತ್ತು ಲೈಂಗಿಕ ಕೆಲಸಗಳಲ್ಲಿಯೂ ತೊಡಗುತ್ತಾರೆ.

**ಸಂಶೋಧನೆಯ ಮುಖ್ಯಾಂಶಗಳು:** ಪ್ರವಾಸ ಕಾಲವು, ಸರ್ಕಾರದಿಂದ ಸಮುದಾಯದವರೆಗೆ, ಎಲ್‌ಜಿಬಿಟಿ ಸಮುದಾಯದವರೂ ಒಳಗೊಂಡಂತೆ ಎಲ್ಲರಿಗೂ ಆದಾಯಗಳಿಸುವಂತಹ ಒಂದು ಮಾಸವಾಗಿರುತ್ತದೆ. ಎಲ್‌ಜಿಬಿಟಿ ಸಮುದಾಯಗಳು ತಮ್ಮ ಜೀವನಾಧಾರಕ್ಕಾಗಿ ಅಲ್ಲದೆ ಹಲವು ಸಾಂಸ್ಕೃತಿಕ ಮತ್ತು ಧಾರ್ಮಿಕ ಉದ್ದೇಶಗಳಿಗಾಗಿಯೂ ಈ ರೀತಿ ಪ್ರವಾಸೀ ತಾಣಗಳಿಗೆ ಭೇಟಿ ನೀಡುತ್ತಾರೆ. ಎಲ್‌ಜಿಬಿಟಿ ಸಮುದಾಯದವರಿಗೆ ಹೋಲಿ, ದೀಪಾವಳಿ, ರಂಜಾನ್ ಮತ್ತು ದುರ್ಗಾ ಪೂಜೆಯಂತಹ ಅನೇಕ ಹಬ್ಬಗಳು ಬಹಳ ಮಹತ್ವಪೂರ್ಣವಾಗಿವೆ. ಇಂತಹ ಹಬ್ಬಗಳು ಇವರಿಗೆ ಆದಾಯಗಳಿಸುವ ಮತ್ತು ತಮ್ಮ ಸಾಮಾಜಿಕ-ಸಾಂಸ್ಕೃತಿಕ ಹಾಗೂ ಆರ್ಥಿಕ ಅಗತ್ಯಗಳನ್ನು ಈಡೇರಿಸುವಂತಹ ಅವಕಾಶಗಳನ್ನು ಒದಗಿಸುತ್ತದೆ. ಆದರೆ, ಈ ಅವಕಾಶಗಳಿಗೆ ಅವರು ತೆರುವ ಬೆಲೆ; ತಮ್ಮ ಹಕ್ಕುಗಳ ಉಲ್ಲಂಘನೆ, ತಾರತಮ್ಯತೆ, ಶೋಷಣೆ ಮತ್ತು ವಂಚನೆಗೊಳಾಗುವುದು. ಈ ದೇಶದ ನಾಗರೀಕರಿಗೆ ಒದಗಬೇಕಿರುವಂತಹ ಮೂಲಭೂತ ಹಕ್ಕುಗಳ ಉಲ್ಲಂಘನೆ, ತಾರತಮ್ಯತೆ, ಶೋಷಣೆ ಮತ್ತು ವಂಚಿತರನ್ನಾಗಿಸುತ್ತದೆ ಮತ್ತು ನ್ಯಾಯ ಹೊಂದುವುದರಿಂದ ದೂರವಿರಿಸುತ್ತದೆ. ಮೂಲಭೂತವಾಗಿ, ಪ್ರವಾಸೀ ತಾಣಗಳಲ್ಲಿ ಎಲ್‌ಜಿಬಿಟಿ ಸಮುದಾಯಗಳಿಗೆ ಲಭ್ಯವಿರುವಂತಹ ಕೆಲಸದ ಅವಕಾಶಗಳನ್ನು ನಾಲ್ಕು ವಿವಿಧ ರೀತಿಗಳಲ್ಲಿ ಗುರುತಿಸಲಾಗುತ್ತದೆ, ಅವುಗಳೆಂದರೆ; ಭಿಕ್ಷೆ ಬೇಡುವುದು, ನೃತ್ಯ ಮಾಡುವುದು ಮತ್ತು ಆಶೀರ್ವಾದ ನೀಡುವುದು ಮತ್ತು ಲೈಂಗಿಕ ವೃತ್ತಿ.

ಸ್ಥಳೀಯ ಗೂಂಡಾಗಳು ಮತ್ತು ಪೊಲೀಸರು, ಲಂಚ ಪಡೆಯುವುದು ಅಥವಾ ಬಲವಂತದಿಂದ ಹಣ ಗಳಿಸುವ ಮೂಲಕ ಹೆಚ್ಚುವರಿ ಹಣ ಗಳಿಸಲು ಈ ಸಂದರ್ಭಗಳನ್ನು ಅವಕಾಶವಾಗಿ ಉಪಯೋಗಿಸಿಕೊಳ್ಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಜನರಿಗಾಗಿ ಸುರಕ್ಷತೆ ಮತ್ತು ಭದ್ರತೆ ಕಲ್ಪಿಸಿಕೊಡುವ ಉದ್ದೇಶದಿಂದ ಪೊಲೀಸರ ಕಾವಲನ್ನು ಹೆಚ್ಚಿಸಲಾಗುತ್ತದೆ, ಅದರಲ್ಲಿಯೂ ವಿಶೇಷವಾಗಿ ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು, ಉದ್ಯಾನವನಗಳು, ರಸ್ತೆಗಳಲ್ಲಿ. ಏಕೆಂದರೆ, ಈ ಸ್ಥಳಗಳು ಸಮಾನ್ಯವಾಗಿ ಎಲ್‌ಜಿಬಿಟಿ ಸಮುದಾಯದವರು ಭೇಟಿ ಮಾಡುವಂತಹ ಸ್ಥಳಗಳಾಗಿರುತ್ತವೆ. ಇಂತಹ ಸಮಯದಲ್ಲಿ ಲಾಡ್ಜ್‌ಗಳ ಮತ್ತು ಹೋಟೆಲ್‌ಗಳ ದರಗಳು ಬಹಳ ಹೆಚ್ಚಾಗಿರುತ್ತದೆ ಎಂಬ ಕಾರಣದಿಂದಾಗಿ ಇಂತಹ ಸ್ಥಳಗಳಲ್ಲಿ ಎಲ್‌ಜಿಬಿಟಿಗಳು ಭೇಟಿಯಾಗುವುದಿಲ್ಲ. ಸ್ವಚ್ಛತೆಯ ಹೆಸರಿನಲ್ಲಿ ಬೇಕಿಲ್ಲದಿರುವಂತಹ ಜನರನ್ನು ತೆರವುಗೊಳಿಸುವ ಅಭಿಯಾನವೂ ಇರುತ್ತದೆ.

ಎಲ್‌ಜಿಬಿಟಿ ಸಮುದಾಯದ ಜನರ ಗುರುತನ್ನು ಗುರುತಿಸದಿರುವುದರಿಂದ, ಇವರಿಗೆ ಕಾನೂನು ಮೂಲಕ ಸಮಾನ ರಕ್ಷಣೆ ಒದಗಿಸುವುದನ್ನು ನಿರಾಕರಿಸಿದಂತಾಗುತ್ತದೆ ಮತ್ತು ಈ ಮೂಲಕ ಈ ಜನರು ಸಾರ್ವಜನಿಕ ಸ್ಥಳಗಳಲ್ಲಿ, ಮನೆಗಳಲ್ಲಿ ಹಾಗೂ ಜೈಲುಗಳಲ್ಲಿಯೂ ಹಾಗೂ ಪೊಲೀಸರಿಂದಲೂ ಶೋಷಣೆ, ದೌರ್ಜನ್ಯ, ಹಿಂಸೆ ಮತ್ತು ಲೈಂಗಿಕ ಶೋಷಣೆ ಎದುರಿಸಲು ಕಾರಣವಾಗುತ್ತದೆ. ಮೈ ಮೇಲೆ ಬೀಳುವುದು, ಅತ್ಯಾಚಾರ ಬಲವಂತದ ಮತ್ತು ಮೌಖಿಕ ಮೈಥುನ, ಸಾಮೂಹಿಕ ಅತ್ಯಾಚಾರ ಮತ್ತು ನಗ್ನಗೊಳಿಸುವುದು ಒಳಗೊಂಡಂತೆ ಲೈಂಗಿಕ ಶೋಷಣೆಗೆ ಒಳಗಾಗುತ್ತಾರೆ. ಜೊತೆಗೆ, ಇವರನ್ನು ಬಲವಂತವಾಗಿ ಭಿಕ್ಷುಕರನ್ನು ಇರಿಸುವಂತಹ ಸ್ಥಳಗಳಲ್ಲಿ ಇರುವಂತೆ ಮಾಡಲಾಗುತ್ತದೆ ಮತ್ತು ಇದರಿಂದಾಗಿ ಅವರು ಖಿನ್ನತೆ, ಮದ್ಯಪಾನ ಚಟ ಹಾಗೂ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ದಾರಿ ಮಾಡಿಕೊಡುತ್ತದೆ.

ಆದಾಗ್ಯೂ ಈ ಎಲ್ಲಾ ವಾಸ್ತವಗಳನ್ನು ಕಡೆಗಣಿಸಲಾಗುತ್ತದೆ ಅಥವಾ ನೈತಿಕ ಕಾರಣಗಳನ್ನು ನೀಡಿ ಸಮಾಜದ ಹಿತಾಸಕ್ತಿಗೆ ವಿರುದ್ಧ ಎಂಬಂತೆ ಬಿಂಬಿಸಲಾಗುತ್ತದೆ ಮತ್ತು ಇದರಿಂದಾಗಿ ಇವರನ್ನು ಸಮಾಜದ ಅಂಚಿನಲ್ಲಿರಿಸುವ ಅಗತ್ಯವಿರುವಂತೆ ಬಿಂಬಿಸಲಾಗುತ್ತದೆ.

ಈ ಎಲ್ಲಾ ವಾಸ್ತವಗಳನ್ನು ಎದುರಿಸುವ ಸಲುವಾಗಿ ಎಲ್‌ಜಿಬಿಟಿ ಸಮುದಾಯದವರು ತಮ್ಮ ಗೌರವವನ್ನು ಕಾಪಾಡಿಕೊಳ್ಳಲು ಮತ್ತು ಗೌರವಯುತ ಕೆಲಸವನ್ನು ಪಡೆಯುವ ಉದ್ದೇಶದಿಂದ ಹೋರಾಟ ಮಾಡಲು ಇಂತಹ ಸ್ಥಳಗಳಲ್ಲಿ ಸಂಘಟಿತರಾಗಿದ್ದಾರೆ. ಇಂತಹ ಸಂಘಟನೆಗಳ ಕೆಲಸಗಳಲ್ಲಿ, ತೊಂದರೆಗೀಡಾಂದಂತಹ ಸಮಯದಲ್ಲಿ ಬೆಂಬಲ ಒದಗಿಸುವುದು, ಆಪ್ತಸಮಾಲೋಚನೆ ಸೇವೆಗಳು, ಮತ್ತು ಕ್ರಮಬದ್ಧವಾದ ಆರೋಗ್ಯ ತಪಾಸಣೆಗಳು ಒಳಗೊಂಡಿವೆ. ಇದಕ್ಕೆ ಜೊತೆಯಾಗಿ, ವೃತ್ತಿಪರ ಕೌಶಲ್ಯಗಳ ನಿರ್ಮಾಣದ ಕಡೆ ದೃಷ್ಟಿಕೋನ ನೀಡಿ, ಈ ಸಮುದಾಯದ ಜನರ ವರ್ತನೆ ಬದಲಾವಣೆ ಮತ್ತು ನಾಯಕತ್ವ ಸಾಮರ್ಥ್ಯಗಳನ್ನು ನಿರ್ಮಿಸುವಂತಹ ಪೂರಕ ತರಬೇತಿ ಕಾರ್ಯಕ್ರಮಗಳನ್ನೂ ಸಹ ಆಯೋಜಿಸುತ್ತವೆ. ಈ ಸಂಘಟನೆಗಳು/ಸಮೂಹಗಳು, ವಿವಿಧ ಭಾಗೀದಾರರಲ್ಲಿ (ಪೊಲೀಸ್, ಸ್ಥಳೀಯ ಸರ್ಕಾರಿ ಪ್ರಾಧಿಕಾರ, ರಾಜಕೀಯ ನಾಯಕರು, ಶಿಕ್ಷಣ ಸಂಸ್ಥೆಗಳು, ಆಟೊ ಚಾಲಕರು ಮತ್ತು ಐಟಿ ಕಂಪನಿಗಳು) ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸಮಾಜದ ದೃಷ್ಟಿಕೋನಗಳು ಮತ್ತು ವರ್ತನೆಯ ಮೇಲೆ ಪ್ರಭಾವ ಬೀರಲು ಶ್ರಮಿಸುತ್ತಿವೆ.

### ಎಲ್‌ಜಿಬಿಟಿ ಸಮುದಾಯಗಳು ಮತ್ತು ಕಾನೂನು

ಭಾರತದ ಸಂವಿಧಾನವು ದೇಶದ ಎಲ್ಲಾ ನಾಗರೀಕರಿಗೂ ಸಮಾನ ಹಕ್ಕುಗಳನ್ನು ಖಾತ್ರಿಪಡಿಸುತ್ತದೆ. ಕಲಂ 29 (1), ಅಲ್ಪಸಂಖ್ಯಾತರ ಸಂಸ್ಕೃತಿ, ಭಾಷೆ ಮತ್ತು ನುಡಿಗಳನ್ನು ಸಂರಕ್ಷಿಸುವಂತೆ ಸೂಚಿಸುತ್ತದೆ. ಮೂಲಭೂತ ಹಕ್ಕುಗಳನ್ನು, ಪ್ರತಿಯೊಬ್ಬರ ಪ್ರಾಥಮಿಕ ಮಾನವ ಹಕ್ಕುಗಳೆಂದು ವ್ಯಾಖ್ಯಾನಿಸಿದೆ ಮತ್ತು ಇದು ಯಾವುದೇ ಜನಾಂಗ, ಹುಟ್ಟಿದ ಸ್ಥಳ, ಧರ್ಮ, ಜಾತಿ, ಮತ ಅಥವಾ ಲಿಂಗವೆನ್ನದೆ ಎಲ್ಲರಿಗೂ ಅನ್ವಯಿಸುತ್ತದೆ. ಸಮಾಜದಲ್ಲಿ ಗುರುತನ್ನು ಒಪ್ಪಿಕೊಳ್ಳಲು ನಿರಾಕರಣೆ, ಅಂತಹ ಜನರನ್ನು ಸಮಾಜದ ಅಂಚಿಗೆ ದೂಡುತ್ತದೆ ಮತ್ತು ವಿವಿಧ ಸ್ವರೂಪಗಳ ಹಿಂಸೆಯನ್ನು ಪ್ರೋತ್ಸಾಹಿಸುತ್ತದೆ ಹಾಗೂ ಅವರಿಗೆ ನ್ಯಾಯ ಒದಗಿಸುವುದನ್ನು ನಿರಾಕರಿಸುತ್ತದೆ ಮತ್ತು ಈ ಮೂಲಕ ಜೀವನದ ಮತ್ತು ಜೀವನಾಧಾರದ ಮೂಲಭೂತ ಹಕ್ಕುಗಳ ಉಲ್ಲಂಘನೆಗೆ ದಾರಿ ಮಾಡಿಕೊಡುತ್ತದೆ. ಪ್ರವಾಸೋದ್ಯಮ



ವಲಯವು, ಇಂತಹ ಜನರಿಗೆ ಒದಗಿಸುವ ಸೀಮಿತ ವೃತ್ತಿಪರ ಅವಕಾಶಗಳಿಂದಾಗಿ, ಇಂತಹ ಜನರು ಅನಿವಾರ್ಯವಾಗಿ ಲೈಂಗಿಕ ಕೆಲಸಗಳಲ್ಲಿ ತೊಡಗಲು, ಭಿಕ್ಷೆ ಬೇಡುವುದು ಅಥವಾ ನೃತ್ಯ ಮಾಡುವಂತಹ ಕೆಲಸಗಳಲ್ಲಿ ತೊಡಗಲು ದಾರಿ ಮ್ಹಾಡಿಕೊಡುತ್ತದೆ.ಸಲಿಂಗಕಾಮವನ್ನು ಅಪರಾಧವಲ್ಲವೆಂದು ಉಲ್ಲೇಖಿಸುವ 2009 ಜುಲೈ 2ರ ದೆಹಲಿಯ ಉಚ್ಚ ನ್ಯಾಯಾಲಯದ ತೀರ್ಪು. ಆದಾಗ್ಯೂ, ದೆಹಲಿ ಉಚ್ಚ ನ್ಯಾಯಾಲಯದ ಪ್ರಬುದ್ಧ ತೀರ್ಪನ್ನು, ಭಾರತದ ಸರ್ವೋಚ್ಚ ನ್ಯಾಯಾಲಯವು ಭಾರತೀಯ ದಂಡ ಸಂಹಿತೆ1ರ ಕಲಂ 377ನ್ನು ಎತ್ತಿ ಹಿಡಿಯುವ ಮೂಲಕ ರದ್ದುಗೊಳಿಸಿತು. ಲೈಂಗಿಕ ಅಲ್ಪಸಂಖ್ಯಾತರ ಸ್ಥಿತಿಗೆ ಅವರು ಸ್ವತಃ ಕಾರಣರಲ್ಲ. ಆದಾಗ್ಯೂ ಅವರು ವಾಸ್ತವವಾಗಿ ಎದುರಿಸುವಂತಹ ಸಮಸ್ಯೆಗಳಿಗೆ ಜನರಲ್ಲಿರುವ ಅಸಹನೆ ಮತ್ತು ಸಂವೇದನಾರಹಿತ ಭಾವನೆಯನ್ನು ಸೂಚಿಸುತ್ತದೆ.

ಭಾರತದ ಸಂವಿಧಾನವು ನಾಗರೀಕರಿಗೆ ಆರು ಮೂಲಭೂತ ಹಕ್ಕುಗಳನ್ನು ಖಾತ್ರಿಪಡಿಸಿವೆ. ಈ ಹಕ್ಕುಗಳನ್ನು ಚಲಾಯಿಸಲು, ವ್ಯಕ್ತಿಯ ಬಳಿ ಅಧಿಕೃತ ಗುರುತಿನ ಸಾಕ್ಷಿಯಿರಬೇಕು. ಈ ರೀತಿಯ ಯಾವುದೇ ಸಾಕ್ಷಿಗಳು ವ್ಯಕ್ತಿಯ ಲೈಂಗಿಕತೆಯನ್ನು ಗುರುತಿಸುವಂತಹ ಯಾವುದಾದರೂ ಸಾಕ್ಷಿಯನ್ನು ಹೊಂದಿರುವುದು ಕಡ್ಡಾಯ. ಈವರೆಗೆ ಕೇವಲ ಪುರುಷ/ಮಹಿಳೆ ಎಂಬ ಎರಡೇ ವರ್ಗಗಳನ್ನು ಹೊಂದಿತ್ತು. ಆದರೆ 2014ರ ಏಪ್ರಿಲ್ ತಿಂಗಳಲ್ಲಿ ಸರ್ವೋಚ್ಚ ನ್ಯಾಯಾಲಯ ಕೊಟ್ಟಂತಹ ಮೈಲಿಗಲ್ಲು ತೀರ್ಪಿನ ನಂತರ, ಮೂರನೆಯ ಲಿಂಗ ಸಂಬಂಧಿ ಗುರುತನ್ನು ಸೇರ್ಪಡೆಗೊಳಿಸಲಾಗಿದೆ ಮತ್ತು ಈ ಮೂಲಕ ಯಾವುದೇ ಸೇವೆಗಳಲ್ಲಿ ಲೈಂಗಿಕ ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯತೆಯನ್ನು ತಡೆಗಟ್ಟಿದೆ.

---

ವಿಭಾಗ 377. ಅಸ್ವಾಭಾವಿಕ ಅಪರಾಧಗಳು: ಸ್ವಯಂ ಪ್ರೇರಣೆಯಿಂದ ಯಾವುದೇ ಗಂಡು, ಹೆಣ್ಣು ಅಥವಾ ಪ್ರಾಣಿ ಪ್ರಕೃತಿ ಆದೇಶದ ವಿರುದ್ಧ ವಿಷಯಲೋಲುಪತೆಯ ಸಂಭೋಗ ಯಾವನು, ಜೀವನದ ಜೈಲು ಶಿಕ್ಷೆ ಅಥವಾ ಹತ್ತು ವರ್ಷಗಳ ವಿಸ್ತಾರವಾಗಿದೆ ಇದು ಅವಧಿಗೆ ವಿವರಣೆ ಎರಡೂ ಸೆರೆವಾಸ, ಮತ್ತು ಶೆಲ್ ಹಾಗಿಲ್ಲ ದಂಡ ಜವಾಬ್ದಾರರಾಗಿರುವುದಿಲ್ಲ.

**ಎಲ್‌ಜಿಬಿಟಿ ಸಮುದಾಯಗಳ ಹಕ್ಕುಗಳಿಗೆ ಸಂಬಂಧಿಸಿದಂತೆ ಪ್ರವಾಸಿ ತಾಣಗಳಲ್ಲಿ ಈ ಕೆಳಕಂಡ ಅಂಶಗಳನ್ನು ಖಾತ್ರಿಪಡಿಸುವಂತೆ ಈಕ್ವೇಷನ್ಸ್ ಒತ್ತಾಯಿಸುತ್ತದೆ:**

• ಪ್ರವಾಸೋದ್ಯಮ ವಲಯದಲ್ಲಿ ತೊಡಗಿಸಿಕೊಂಡಿರುವಂತಹ ಎಲ್‌ಜಿಬಿಟಿ ಸಮುದಾಯದ ಜನರನ್ನು ಸಬಲಗೊಳಿಸಲು ಪೂರಕವಾದ ಮತ್ತು ವ್ಯವಸ್ಥಿತ ಮಾರ್ಗಗಳಲ್ಲಿ ತೊಡಗುವಂತೆ ಸರ್ಕಾರಗಳು, ನೀತಿ ರೂಪಕರು, ಪ್ರವಾಸೋದ್ಯಮ ವಲಯ ಮತ್ತು ನಾಗರೀಕ ಸಮಾಜವನ್ನು ಕೋರುತ್ತೇವೆ. ಪ್ರವಾಸಿ ಸ್ಥಳಗಳು ಎಲ್‌ಜಿಬಿಟಿ ಸಮುದಾಯದ ಜನರ ವಿರುದ್ಧ ಶೋಷಣೆ ಎಸಗುವಂತಹ ಮತ್ತು ಅಪರಾಧಗಳನ್ನು ಎಸಗುವಂತಹ ಸ್ಥಳಗಳೆಂದು ಸರ್ಕಾರ ಗುರುತಿಸಬೇಕಿದೆ. ಎಲ್‌ಜಿಬಿಟಿ ಸಮುದಾಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು, ಪ್ರವಾಸಿ ನೀತಿಗಳು & ಯೋಜನೆಗಳಲ್ಲಿ ಉಲ್ಲೇಖಿಸಬೇಕು ಮತ್ತು ಪ್ರವಾಸೋದ್ಯಮ ಮತ್ತು ಪೂರಕ ವಲಯಗಳಲ್ಲಿ ಅವರ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗಾಗಿ, ಜೀವನಧಾರದ ಅವಕಾಶಗಳನ್ನು ಖಾತ್ರಿಪಡಿಸುವಂತಹ, ಸರಿಯಾದ ಉದ್ಯೋಗಗಳನ್ನು ಅಥವಾ ಉದ್ಯಮ ಅವಕಾಶವನ್ನು ಒದಗಿಸುವಂತಹ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಈ ಮೂಲಕ ಅವರು ಸಮಾಜದಲ್ಲಿ ಗೌರವಯುತವಾದ ಜೀವನ ನಡೆಸುವ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

• ಪ್ರವಾಸೋದ್ಯಮ ಸಚಿವಾಲಯವು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಮತ್ತು ಸಾಮಾಜಿಕ ನ್ಯಾಯ ಸಚಿವಾಲಯಗಳನ್ನು ಒಳಗೊಂಡಂತೆ ಸಂಬಂಧಪಟ್ಟ ಇಲಾಖೆಗಳ ಸಂಯೋಜನೆಯೊಂದಿಗೆ ಪ್ರವಾಸೋದ್ಯಮದಲ್ಲಿ ಎಲ್‌ಜಿಬಿಟಿ ಸಮುದಾಯದವರ ಸಮಸ್ಯೆಗಳನ್ನು ಪರಿಶೀಲಿಸಿ ಅದನ್ನು ಬಗೆಹರಿಸಬೇಕು.

• ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯ ಮೂರನೆಯ ಲಿಂಗವನ್ನು ಗುರುತಿಸಿರುವಂತೆ, ಸಾಮಾನ್ಯವಾಗಿ ಮತ್ತು ನಿರ್ದಿಷ್ಟವಾಗಿ ಪ್ರವಾಸಿ ತಾಣಗಳಲ್ಲಿ ಎಲ್‌ಜಿಬಿಟಿ ಸಮುದಾಯಗಳ ಸಾಂವಿಧಾನಿಕ ಹಕ್ಕುಗಳ ಹಿತರಕ್ಷಣೆಗಾಗಿ ಸರ್ಕಾರಗಳು ಪ್ರತ್ಯೇಕ ಆಯೋಗವನ್ನು ರಚಿಸಬೇಕು ಮತ್ತು ಎಲ್‌ಜಿಬಿಟಿ ಸಮುದಾಯದವರ ಹಕ್ಕುಗಳನ್ನು ಕಡೆಗಣಿಸಿ ಅವರ ಗೌರವಕ್ಕೆ ಧಕ್ಕೆ ತರುವುಂತಹ ಚಟುವಟಿಕೆಗಳನ್ನು ಪ್ರೋತ್ಸಾಹಿಸುವಂತಹ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲಾಗುವುದಿಲ್ಲ ಎಂದು ಘೋಷಿಸಬೇಕು.



ನಿರ್ದಿಷ್ಟವಾಗಿ ಎಲ್‌ಜಿಬಿಟಿ ಸಮುದಾಯದವರ ವಿರುದ್ಧ ಪ್ರವಾಸೋದ್ಯಮದ ಪರಿಣಾಮಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳುವ ಆಸಕ್ತಿಯಿದೆಯೇ? ಹಾಗಾದರೆ ಹೆಚ್ಚಿನ ಮಾಹಿತಿಗಾಗಿ ನಮಗೆ ಬರೆಯಿರಿ, ಇ–ಮೇಲ್ *info@equitabletourism.org* ಅಥವಾ ಭೇಟಿ ನೀಡಿ*: www.equitabletourism.org*

**ನಾವು ಯಾರು?**

1985ರಲ್ಲಿ ಸ್ಥಾಪನೆಯಾದ ಈಕ್ವೇಷನ್ಸ್, ಭಾರತದಲ್ಲಿ ಪ್ರವಾಸೋದ್ಯಮವನ್ನು ಪ್ರಜಾಸತ್ತಾತ್ಮಕಗೊಳಿಸುವ ಧ್ಯೇಯವನ್ನು ಹೊಂದಿರುವಂತಹ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಸಂಶೋಧನೆಗಳು, ವಕಾಲತ್ತು ಮತ್ತು ಅಭಿಯಾನಗಳನ್ನು ಆಯೋಜಿಸುವಂತಹ ಒಂದು ಸಂಸ್ಥೆಯಾಗಿದೆ. ನಾವು ಸ್ಥಳೀಯ ಸಮುದಾಯಗಳ ಮೇಲೆ ಪ್ರವಾಸೋದ್ಯಮದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಪಾರಿಸರಿಕ ಪರಿಣಾಮಗಳನ್ನು ಅಧ್ಯಯನ ನಡೆಸುತ್ತೇವೆ. ಸಮಾಜಗಳ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ನಮ್ಮ ಕಾರ್ಯ ವ್ಯಾಪ್ತಿಯ ಪ್ರಮುಖ ಕ್ಷೇತ್ರವಾಗಿದೆ.

**ವಿನ್ಯಾಸ ಮತ್ತು ಚಿತ್ರಗಳು:** ವಿದುಷಿ. ಯಾದವ್
**ಮುದ್ರಣ:** ನ್ಯಾಷನಲ್ ಪ್ರಿಂಟಿಂಗ್ ಪ್ರೆಸ್

Equations